43

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ಚಾಮರಾಜನಗರ ಜಿಲ್ಲೆಯಲ್ಲಿ ಜಲಾನಯನ ಅಭಿವೃದ್ಧಿ ಕಾಮಗಾರಿಗಳಲ್ಲಿ ಅವ್ಯವಹಾರದ ಬಗ್ಗೆ ಶಿಸ್ತು ಕ್ರಮ.**

ಓದಲಾಗಿದೆ:

1. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಇವರ ಪತ್ರ ಸಂಖ್ಯೆ: ಜಅಇ/ಆಡಳಿತ-3/ವಿವಿ-13/05/2007-08, ದಿನಾಂಕ: 22-10-2007.
2. ಸರ್ಕಾರದ ಕಾರಣ ಕೇಳುವ ಪತ್ರದ ಸಂಖ್ಯೆ: ಕೃತೋಇ 67 ಕೃಪವಿ 2007, ದಿನಾಂಕ: 21-11-2007.
3. ಸರ್ಕಾರದ ಆದೇಶ ಸಂಖ್ಯೆ: ಕೃತೋಇ 67 ಕೃಪವಿ 2007, ದಿನಾಂಕ: 16-10-2008 ಮತ್ತು ದಿನಾಂಕ:16-01-2009.
4. ವಿಚಾರಣಾಧಿಕಾರಿಯವರ ವರದಿ ದಿನಾಂಕ: 25-01-2011.

*********

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು, ಇವರು ತಮ್ಮ ತಂಡದೊಂದಿಗೆ ಚಾಮರಾಜ ನಗರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಕಾಮಗಾರಿಗಳನ್ನು ಪರಿಶೀಲಿಸಿ, ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿನ ಕಾಮಗಾರಿಗಳಲ್ಲಿನ ಲೋಪದೋಷಗಳ ಬಗ್ಗೆ ನೀಡಿದ ತನಿಖಾವರದಿಯನ್ನಯ ಈ ಲೋಪದೋಷಗಳಿಗೆ ಕಾರಣರಾದ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

1. ಶ್ರೀ ಸೋಮಶೇಖರ್, ಸಹಾಯಕ ಕೃಷಿ ನಿರ್ದೇಶಕರು.
2. ಶ್ರೀ ಜಿ.ಎಸ್.ಇಂದೂಧರ ಮೂರ್ತಿ, ಕೃಷಿ ಅಧಿಕಾರಿ.
3. ಶ್ರೀ ಶಿವಲಿಂಗೇಗೌಡ, ಸಹಾಯಕ ಕೃಷಿ ಅಧಿಕಾರಿ.
4. ಶ್ರೀ ಕನ್ನಯ್ಯ, ಕೃಷಿ ಸಹಾಯಕ.
5. ಶ್ರೀ ಮಲ್ಲಪ್ಪ, ಕೃಷಿ ಸಹಾಯಕ.
6. ಶ್ರೀ ಕೆ. ರಾಮನಾಯಕ, ಕೃಷಿ ಸಹಾಯಕ.
7. ಶ್ರೀ ಟಿ.ಸಿ.ನಾಗರಾಜು, ಕೃಷಿ ಸಹಾಯಕ.
8. ಶ್ರೀ ಗುರುಸ್ವಾಮಿ, ಕೃಷಿ ಸಹಾಯಕ.

14

ಆಯುಕ್ತರು ಜಲಾನಯನ ಅಭಿವೃದ್ಧಿ ಇಲಾಖೆ ಇವರ ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ ಕ್ರಮಾಂಕ (2) ರಲ್ಲಿ ಓದಲಾದ ಸರ್ಕಾರದ ಕಾರಣ ಕೇಳುವ ಪತ್ರದೊಂದಿಗೆ ದೋಷಾರೋಪಣ ಪಟ್ಟಿಯನ್ನು ಸದರಿ ಅಧಿಕಾರಿಗಳಿಗೆ ಜಾರಿಮಾಡಿ ಸದರಿ ದೋಷಾರೋಪಣ ಪಟ್ಟಿಗೆ ಅವರುಗಳು ನೀಡಿದ ಹೇಳಿಕೆಗಳನ್ನು ಪರಿಶೀಲಿಸಿದ ನಂತರ ಮೇಲೆ ಕ್ರಮಾಂಕ: (3) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ.ಎನ್.ಸುಬ್ಬರಾವ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಅಧೀಕ್ಷಕರು, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಜಲಾನಯನ ಅಭಿವೃದ್ಧಿ ಇಲಾಖೆ ಕಛೇರಿ,ಚಾಮರಾಜನಗರ, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಕ್ರಮಾಂಕ (4)ರಲ್ಲಿ ಓದಲಾದ ಪತ್ರದಲ್ಲಿ ಪ್ರಕರಣದ ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಅವರು ತಮ್ಮ ವರದಿಯಲ್ಲಿ ಮೇಲ್ಕಂಡ ಅಧಿಕಾರಿ/ನೌಕರರ ವಿರುದ್ಧದ ಆರೋಪಗಳು ರುಜುವಾತಾಗಿರುವುದಿಲ್ಲವೆಂದು ನಿರ್ಣಯ ನೀಡಿರುತ್ತಾರೆ. ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಸಾಕ್ಷಿಗಳ ಹೇಳಿಕೆ ಹಾಗೂ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ವಿಚಾರಣೆ ನಡೆಸಿದ ನಂತರ ಅಧಿಕಾರಿಯವರು ನೀಡಿದ ರಕ್ಷಣಾ ಹೇಳಿಕೆ ಹಾಗೂ ಅವರ ಲಿಖಿತ ಪ್ರತಿವಾದವನ್ನು ಮೌಖಿಕ ಮತ್ತು ಲಿಖಿತ ಸಾಕ್ಷ್ಯಾಧಾರಗಳ ಜೊತೆ ವಿಮರ್ಶಿಸಿ ಆಪಾದಿತರು ಸಲ್ಲಿಸಿದ್ದ ರಕ್ಷಣಾ ಹೇಳಿಕೆ, ಪ್ರಶ್ನಾವಳಿ ವಿವರಣೆ ಹಾಗೂ ಮೌಖಿಕ ಪ್ರತಿವಾದವನ್ನು ವಿಚಾರಣಾ ವರದಿಯಲ್ಲಿ ದಾಖಲಿಸಿ, ಈ ಪ್ರಕರಣದಲ್ಲಿ ಸದರಿ ಅಧಿಕಾರಿ/ನೌಕರರ ವಿರುದ್ಧದ ಆರೋಪಗಳು ರುಜುವಾತಾಗಿರುವುದಿಲ್ಲವೆಂದು ನಿರ್ಣಯ ನೀಡಿರುತ್ತಾರೆ.

ವಿಚಾರಣಾಧಿಕಾರಿಯವರು ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿದ್ದು ವಿಚಾರಣೆಯನ್ನು ನಿಯಮಾನುಸಾರ ನಡೆಸಿ ಆರೋಪದ ಕುರಿತಂತೆ ಸಾಕ್ಷ್ಯಾಧಾರಗಳ ಸಹಿತ ಸಮರ್ಪಕವಾಗಿ ಚರ್ಚಿಸಿ ನಿರ್ಣಯ ದಾಖಲಿಸಿರುವುದರಿಂದ ಸದರಿ ವಿಚಾರಣಾ ವರದಿಯನ್ನು ಅಂಗೀಕರಿಸಲು ತೀರ್ಮಾನಿಸಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ

**ಸರ್ಕಾರದ ಆದೇಶ ಸಂಖ್ಯೆ: ಕೃಇ 67 ಕೃಪವಿ 2007 ಬೆಂಗಳೂರು,**
**ದಿನಾಂಕ:30/05/2012**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಈ ಕೆಳಕಂಡ

429

ಅಧಿಕಾರಿ/ನೌಕರರ ವಿರುದ್ಧದ ಆರೋಪಗಳು ಇಲಾಖಾ ವಿಚಾರಣೆಯಲ್ಲಿ ರುಜುವಾತಾಗದ ಕಾರಣ ಅವರನ್ನು ಅವರ ಮೇಲಿನ ಆರೋಪಗಳಿಂದ ದೋಷಮುಕ್ತರನ್ನಾಗಿ ಮಾಡಿ ಆದೇಶಿಸಿದೆ.

1. ಶ್ರೀ ಸೋಮಶೇಖರ್, ಸಹಾಯಕ ಕೃಷಿ ನಿರ್ದೇಶಕರು.
2. ಶ್ರೀ ಜಿ.ಎಸ್.ಇಂದೂಧರ ಮೂರ್ತಿ, ಕೃಷಿ ಅಧಿಕಾರಿ.
3. ಶ್ರೀ ಶಿವಲಿಂಗೇಗೌಡ, ಸಹಾಯಕ ಕೃಷಿ ಅಧಿಕಾರಿ.
4. ಶ್ರೀ ವಿ.ಕನ್ನಯ್ಯ, ಕೃಷಿ ಸಹಾಯಕ.
5. ಶ್ರೀ ಮಲ್ಲಪ್ಪ, ಕೃಷಿ ಸಹಾಯಕ.
6. ಶ್ರೀ ಕೆ. ರಾಮನಾಯಕ, ಕೃಷಿ ಸಹಾಯಕ.
7. ಶ್ರೀ ಪಿ.ಸಿ.ನಾಗರಾಜು, ಕೃಷಿ ಸಹಾಯಕ.
8. ಶ್ರೀ ಗುರುಸ್ವಾಮಿ, ಕೃಷಿ ಸಹಾಯಕ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ.

Manjunath 30/3/12
(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
4) ಶ್ರೀ.ಎನ್.ಸುಬ್ಬರಾವ್ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ನಂ. 1033, 9ನೇ ಬಿ ಮೇನ್, 8ನೇ ಕ್ರಾಸ್.ನ್ಯಾಯಾಂಗ ಬಡಾವಣೆ, ಜಿ.ಕೆ.ವಿ.ಕೆ ಅಂಚೆ, ಬೆಂಗಳೂರು-560 065.
5) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
6) ಸಂಬಂಧಿಸಿದ ಅಧಿಕಾರಿಗಳು (ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಇವರ ಮೂಲಕ).
7) ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
8) ಸರ್ಕಾರದ ಉಪ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಸಹಾಯಕರು.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

.........